ಅ) ಬಂದಿದೆ

ಆ) ಶಾಲೆಗಳಲ್ಲಿನ ಮಂಜೂರಾಗಿರುವ ಹುದ್ದೆಗನುಗುಣವಾಗಿ ಹಾಗೂ ವಿದ್ಯಾರ್ಹತೆಗನುಗುಣವಾಗಿ ವೇತನ ಶ್ರೇಣಿಗಳನ್ನು ನಿಗದಿ ಪಡಿಸಲಾಗಿದೆ. ಹುದ್ದೆ ಮಂಜೂರಾತಿಗನುಗುಣವಾಗಿ ಮತ್ತು ವಿದ್ಯಾರ್ಹತೆಗನುಗುಣವಾಗಿ ಇವರುಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಆದುದರಿಂದ ಈ ತಾರತಮ್ಯವನ್ನು ಸರಿಪಡಿಸಲು ಪ್ರಸ್ತುತ ನಿಯಮಾನುಸಾರ ಅವಕಾಶವಿರುವುದಿಲ್ಲ.

ಇ) ಮೇಲೆ (ಅ)ನಲ್ಲಿ ಹೇಳಿರುವ ಉತ್ತರದಿಂದ ಈಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾಂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ ಶಿಕ್ಷಕರ ಸಂಖ್ಯೆ

292 (599) ಶ್ರೀ ಬಿ.ಐ. ಪಾಟೀಲ. (ಉಚ್ಚಂಗಾವ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಮರಾಠಿ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಈ ಹುದ್ದೆಗಳನ್ನು ಜರೂರಾಗಿ ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಬೆಳಗಾಂ ನಗರವು ಸೇರದಂತೆ ಬೆಳಗಾಂ ತಾಲ್ಲೂಕಿನಲ್ಲಿ ಒಟ್ಟು 27ಮರಾಠಿ ಶಿಕ್ಷಕರ ಹುದ್ದೆಗಳು ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿವೆ.

ಆ) 24 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಅನ್ವಯ ಆದಷ್ಟು ಬೇಗ ತುಂಬಲಾಗುವುದು.

ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಭರ್ತಿ

293 (609) ಶ್ರೀ ಮಂಜುನಾಥ ಕುನ್ನೂರ್ (ಶಿಗ್ಗಾಂವ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ;

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ;

ಇ) ಶಿಗ್ಗಾಂವ ಮತ್ತು ಸವಣೂರಿನಲ್ಲಿ ಹೆಚ್ಚಿನ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇರಲು ಕಾರಣಗಳೇನು;

ಈ) ಇದನ್ನು ಎಷ್ಟು ದಿವಸದಲ್ಲಿ ಭರ್ತಿ ಮಾಡಲಾಗುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 13,149

ಅ) 960

ಇ) ಈಗಾಗಲೇ ಭರ್ತಿ ಮಾಡಿರುವ ಕಪ್ಪು ಹಲಗೆ ಕಾರ್ಯಾಚರಣೆಯ ನಾಲ್ಕನೇ ಹಂತದ ಹುದ್ದೆಗಳು ಶಿಗ್ಗಾಂವ ಮತ್ತು ಸವಣೂರಿನಲ್ಲಿ ಇರಲಿಲ್ಲವಾದ್ದರಿಂದ ಹೆಚ್ಚು ಹುದ್ದೆಗಳು ಖಾಲಿಯಿರಲು ಕಾರಣವಾಗಿದೆ.

ಈ) ಧಾರವಾಡ ಜಿಲ್ಲೆಯಲ್ಲಿ ತೆರವಿರುವ ಹುದ್ದೆಗಳ ಪೈಕಿ 58 ಹುದ್ದೆಗಳನ್ನು ತುಂಬಲಾಗುತ್ತಿದೆ. ಇದರಲ್ಲಿ ಸವಣೂರು ತಾಲ್ಲೂಕಿನ 24 ಹುದ್ದೆಗಳು ಸೇರಿವೆ. ಇನ್ನು 674 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಆದಷ್ಟು ಬೇಗನೆ ತುಂಬಲಾಗುವುದು.

ಸೋಮವಾರಪೇಟೆ ತಾಲ್ಲೂಕಿನ ಶಾಲಾ ಕಟ್ಟಡಗಳನ್ನು ದುರಸ್ತಿಗೆ ಹಣ ಬಿಡುಗಡೆ

294 (608) ಶ್ರೀ ಎ.ಎಸ್. ಬೆಳ್ಳಿಯಪ್ಪ (ಸೋಮವಾರಪೇಟೆ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರಪೇಟೆ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು, ಅಲ್ಲಿ ತುಂಬಾ ಮಳೆ ಬೀಳುವುದರಿಂದ ಶಾಲಾ ಕಟ್ಟಡಗಳು ಹಾಳಾಗಿ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಶಾಲಾ ಕಟ್ಟಡಗಳ ದುರಸ್ತಿಗೆ ಹಣವನ್ನು ಯಾವಾಗ ಮಂಜೂರು ಮಾಡಲಾಗುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಹೌದು.

ಆ) ಜಿಲ್ಲಾ ಪರಿಷತ್ತು ಕೊಡಗು ಜಿಲ್ಲೆ ಇವರ ಮೂಲಕ ಸೋಮವಾರಪೇಟೆ ತಾಲ್ಲೂಕು ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಪ್ರತಿವರ್ಷ ಹಣ ಬಿಡುಗಡೆ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

1990–91	ರೂ. 3.16 ಲಕ್ಷಗಳು
1991–92	ರೂ. 10.00 ಲಕ್ಷಗಳು
1992–93	ರೂ. 6.00 ಲಕ್ಷಗಳು

Veterinary Hospitals in Bangalore City

296 (328) Sri R. Dayananda Rao (Gandhinagar):-

Will the Minister of State for Animal Husbandry by pleased to state.

a) the total No. of Veterinary Hospitals/Dispensaries in Bangalore City;

b) the Total No. of Animals in Bangalore City;